ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಃದಃನ್ಯಾಃದಂ.,ರವರು, ಕಡೂರು
C.C. No.3431/2023.

ದಿನಾಂಕಃ**19.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಪಾಟೀ ಸವಾಲುಃ- ಆರೋಪಿ ಪರ ಟಿ ಜಿ ವಕೀಲರಿಂದಃ-

ನಾನು ಹೇಲ್ತ್ ಇನ್ಸ್‌ಪೆಕ್ಟರ್ ಆಫೀಸರ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಚಿಕ್ಕಮಗಳೂರಿನಲ್ಲಿ ಹೇಲ್ತ್ ಇನ್ಸ್‌ಪೆಕ್ಟರ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ಉದ್ಯೋಗದಲ್ಲಿ ಇರುವ ಬಗ್ಗೆ ನೋಟೀಸು, ದೂರು, ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಕೆಲಸಕ್ಕೆ ಸೇರಿ ಕೇವಲ ಒಂದುವರ್ಷವಾಗಿದೆ ಎನ್ನುತ್ತಾರೆ. ನಾನು ಆರೋಪಿಗೆ ಹಣವನ್ನು ಪೋನ್ ಮೂಲಕ ವರ್ಗಾಹಿಸಿದ್ದೇನೆ. ಯಾವ ಪೋನ್ ನಂಬರಿನ ಪೋನ-ಪೇ ನಿಂದ ಆರೋಪಿ ಹಣ ವರ್ಗಾವಣೆ ಮಾಡಿದ್ದೇನೆ ಎಂದು ನೋಟೀಸು, ದೂರು, ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ. ನಿಪಿ 1 ರಲ್ಲಿನ ಒಕ್ಕಣೆಯನ್ನು ನನ್ನ ಗಂಡ ಭರ್ತಿ ಮಾಡಿರುತ್ತಾರೆ. ಆದ್ದರಿಂದ ನಿಪಿ 1 ರ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜೊತೆಯಲ್ಲಿಯೇ ಇದ್ದೆವು ಎನ್ನುತ್ತಾರೆ.

ಆರೋಪಿಯವರಿಂದ ನನ್ನ ಗಂಡ ಇಟಾಚಿಯನ್ನು ಬಾಡಿಗೆಗೆ ಪಡೆದಿದ್ದರು ಎಂದರೆ ಸರಿ. ಅದರಂತೆ ಸದರಿ ಇಟಾಚಿಯನ್ನು ಒಂದು ಗಂಟೆ ಕೆಲಸಕ್ಕೆ 100 ರೂ. ಬಾಡಿಗೆಯಂತೆ ನನ್ನ ಗಂಡನಿಗೆ ನೀಡಲಾಗಿತ್ತು ಎಂದರೆ ಸರಿ. ನಿಪಿ 1 ರ ಚೆಕ್ ಸಂಖ್ಯೆ 637955 ಆಗಿರುತ್ತದೆ. ದಿಃ24.07.2023 ರಂದು ನೀಡಿದ್ದ ನೋಟೀಸ್ ಅನ್ನು ಯಾರು ಸ್ವೀಕರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವೀಕರಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ದಿಃ29.03.2023 ರಂದು ಆರೋಪಿಗೆ ಯಾವ ಪೋನ್ ಪೇ ಸಂಖ್ಯೆಯಿಂದ ರೂ.25,000/- ಹಣ ವರ್ಗಾವಣೆಯಾಗಿದೆ ಎಂದು ನನ್ನ ನೋಟೀಸು, ದೂರು ಅಥಾವ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಸದರಿ ಹಣವನ್ನು ಪೋನ್ ನಂಬರ್ 9148668434 ರಡಿಯಲ್ಲಿ ಕಳುಹಿಸಿರುತ್ತೇನೆ.

ಆರೋಪಿಯು ದಿಃ13.03.2023 ರಂದು ಸಾಲ ಕೇಳಿದ್ದರು. ನಿಪಿ 1 ರಲ್ಲಿನ ಒಕ್ಕಣೆಯ ಕೈಬರಹ ಮತ್ತು ಸಹಿಯ ಕೈಬರಹ ಹಾಗೂ ಅದರ ಶಾಹಿಯು ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿ. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯು

ದಾವಣಗೆರೆಯ ಅಣಜಿಗೆರೆ ಗ್ರಾಮದವರು. ಆರೋಪಿಯು ನನ್ನ ಗಂಡನಿಗೆ ಸು.12 ವರ್ಷಕ್ಕು ಮುಂಚಿನಿಂದ ಪರಿಚಯವಿದ್ದಾರೆ.

ಆರೋಪಿಯು ಸರಿಯಾಗಿ ಕಮಿಷನ್ ನೀಡುತ್ತಿಲ್ಲ ಎಂದು ಇಟಾಚಿಯನ್ನು 3 ತಿಂಗಳ ನಂತರ ವಾಪಾಸು ತೆಗೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದೇ ದಿನ ವಾಪಾಸು ತೆಗೆದುಕೊಂಡು ಹೋಗಿದ್ದಾರೆ ಎನ್ನುತ್ತಾರೆ. ದಿಃ05.06.2023 ರಂದು ನಮ್ಮ ಮನೆಯಲ್ಲಿಯೇ ಆರೋಪಿಗೆ ರೂ.65,000/- ನೀಡಿರುತ್ತೇವೆ. ಸದರಿ ಹಣವು ರೂ.500 ರ ಮುಖ ಬೆಲೆಯದ್ದಾಗಿದೆ. ಸದರಿ ಹಣ ಎಷ್ಟು ನೋಟುಗಳಲ್ಲಿ ಇತ್ತು ಎಂದು ನಮೂದಿಸಿಲ್ಲ.

ನಾವು ಆರೋಪಿಗೆ ಫೋನ್ ಪೇ ಮೂಲಕ ಹಣ ಪಾವತಿಸಿದ್ದೆವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಆರೋಪಿಯವರು ಇಟಾಚಿಯನ್ನು ಬಾಡಿಗೆಗೆ ನೀಡಿದ್ದರಿಂದ ಸದರಿ ಇಟಾಚಿಯ ಇ.ಎಂ.ಐ ಅನ್ನು ನಾವೇ ಪಾವತಿಸುವಂತೆ ಹೇಳಿ ನಮಗೆ ಒಂದು ಚೆಕ್ ನೀಡಿದ್ದರು ಎಂದರೆ ಸರಿ. ಸದರಿ ಚೆಕ್ ಬದಲಿಯಾಗಿ ಹೆಚ್ ಡಿ ಬಿ ಫೈನಾನ್ಸ್ ಗೆ ಇ ಎಂ ಐ ಹಣ ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿಃ05.06.2023 ರಂದು ಪಡೆದಿದ್ದ ಹಣದ ವಸೂಲಾತಿಗಾಗಿ ಸದರಿ ಚೆಕ್ ನೀಡಿದ್ದರು ಎನ್ನುತ್ತಾರೆ. ಆರೋಪಿಗೆ ಮೋಸ ಮಾಡಿ ಅಕ್ರಮ ಲಾಭ ಮಾಡಬೇಕೆಂದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮಿಂದ ರೂ.1,42,000/- ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದಿದ್ದರು ಹಾಗೂ ಆರೋಪಿಗೆ ಯಾವುದೇ ಹಣ ನೀಡಿಲ್ಲದಿದ್ದರು ನನ್ನ ಗಂಡನ ಮಾತು ಕೇಳಿಕೊಂಡು ಸುಳ್ಳು ಪ್ರಕರಣದ ದಾಖಲಿಸಿ ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.